ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 24.08.2023

**ಪಾಟೀ ಸವಾಲು : ಆರೋಪಿ ಪರ ಶ್ರೀ ಹೆಚ್. ಎಸ್. ಜೆ. ವಕೀಲರಿಂದಃ**

1) ನಾನು ಬಟ್ಟೆ ವ್ಯಾಪಾರ ಮಾಡುತ್ತೇನೆ ಮತ್ತು ಕಿರಾಣಿ ಅಂಗಡಿ ಇರುತ್ತದೆ. ನನ್ನ ಗಂಡ ಕಿರಾಣಿ ಅಂಗಡಿ ನಡೆಸುತ್ತಾರೆ. ನನ್ನ ಮನೆ ಬೆಟ್ಟದ ಮಲ್ಲೇಶ್ವರ ನಗರದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಮನೆ ಸರ್ಕಾರದ ಯೋಜನೆಯಲ್ಲಿ ಬಂದ ಮನೆ ಎಂದರೆ ಸರಿಯಲ್ಲ. ಮನೆ ಕಟ್ಟಲು ಸರ್ಕಾರದವರು ಅನುದಾನ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಬಟ್ಟೆ ವ್ಯಾಪಾರ ಮಾಡುವ ಬಗ್ಗೆ ಮತ್ತು ಕಿರಾಣಿ ಅಂಗಡಿ ಬಗ್ಗೆ ಬರೆಸಿರುವುದಿಲ್ಲ. ಕಿರಾಣಿ ಅಂಗಡಿ ಇದ್ದ ಬಗ್ಗೆ ಪುರಸಭೆಯವರು ಪರವಾನಿಗೆಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಬಟ್ಟೆ ವ್ಯಾಪಾರ ಮನೆ ಮನೆಗೆ ಹೋಗಿ ಮಾಡುತ್ತೇನೆ. ನಾನು ಬಟ್ಟೆ ವ್ಯಾಪಾರ ಮಾಡುವುದಿಲ್ಲ ಮತ್ತು ನಮಗೆ ಕಿರಾಣಿ ಅಂಗಡಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ನಾನು ಕಾರದ ಪುಡಿ ವ್ಯಾಪಾರ ಸಹ ಮಾಡುತ್ತೀದೆ. ಈಗ ಮಾಡುತ್ತಿಲ್ಲ.

2) ಆರೋಪಿತನ ಹೆಸರು ನನಗೆ ಗೊತ್ತು. ಆತನ ಊರು ಶಿಗ್ಗಾಂವ ಇರುತ್ತದೆ. ನನಗೆ ಆರೋಪಿತನ ಪರಿಚಯ ಸುಮಾರು ವರ್ಷದಿಂದ ಇರುತ್ತದೆ. ಆರೋಪಿತನು ಕೆ. ಎ. ಬಿ. ಯಲ್ಲಿ ಕೆಲಸ ಮಾಡುತ್ತಾನೆ ಅಂತಾ ಗೊತ್ತು. ಆದರೆ ಎಲ್ಲಿ, ಎಲ್ಲಿ ಕೆಲಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಹಾವೇರಿಯ ಲಿಯಾಕತ ಎಂಬುವವರಿಂದ ಆರೋಪಿತನ ಪರಿಚಯ ಆಗಿರುತ್ತದೆ. ಲಿಯಾಕತ ಇವರು ನನಗೆ ಪರಿಚಯಸ್ಥರು ಹಾಗೂ ಸಂಬಂಧಿಕರು ಇರುತ್ತಾರೆ. ಲಿಯಾಕತ ಇವರು ಗ್ಯಾರೇಜ್ ನಡೆಸುತ್ತಾರೆ. ಆರೋಪಿತನು ಮೊದಲು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ನಂತರ ರಾಣೆಬೆನ್ನೂರು, ದಾವಣಗೆರೆಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ರಾಣೆಬೆನ್ನೂರಿನಲ್ಲಿ ಕೆಲಸ ಮಾಡುತ್ತಿದ ಬಗ್ಗೆ ನನಗೆ ಗೊತ್ತು.

3) ನಿಪಿ-1 ನ್ನು ಆರೋಪಿತನು ನನಗೆ ನನ್ನ ಮನೆಗೆ ಬಂದು ನೀಡಿರುತ್ತಾನೆ. ಆರೋಪಿತನು ಬೆಳಗ್ಗೆ 10.30 ರಿಂದ ಸಂಜೆ 05.00 ಗಂಟೆಯವರೆಗೆ ಕೆ. ಇ. ಬಿ. ಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆರೋಪಿತನಿಗೂ ಮತ್ತು ಲಿಯಾಕತನಿಗೂ ಯಾವುದೇ ಒಡನಾಟ ಇಲ್ಲ ಎಂದರೆ ಸರಿಯಲ್ಲ. ದೂರನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಆರೋಪಿತನು ಸುಮಾರು 6-7 ವರ್ಷದಿಂದ ಪರಿಚಯ ಇರುತ್ತಾರೆ. ಆಗ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ದೂರಿನಲ್ಲಿ 6-7 ವರ್ಷದಿಂದ ಪರಿಚಯ ಅಂತಾ ಬರೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ದೂರಿನಲ್ಲಿ ಮತ್ತು ನೋಟೀಸ್ಸಿನಲ್ಲಿ ನಿಪಿ-1 ನ್ನು ಆರೋಪಿತನು ಮನೆಗೆ ಬಂದು ಕೊಟ್ಟ ಹೋದ ಬಗ್ಗೆ

ಬರೆದಿರುವುದಿಲ್ಲ. ನನ್ನ ಮೇಲೆ ಬ್ಯಾಡಗಿ ನ್ಯಾಯಾಲಯದಲ್ಲಿ ಒಂದು ಚೆಕ್ಕಿನ ಪ್ರಕರಣ ಇದೆ ಆದರೆ ಅದು ಸುಳ್ಳು ಇರುತ್ತದೆ. ಸದರಿ ಪ್ರಕರಣದಲ್ಲಿ ನಾನು ನನ್ನ ಪಾಲಿನ ಹಣ ತುಂಬಿರುತ್ತೇನೆ. ನಾನು ಬೀರೇಶ್ವರ ಬ್ಯಾಂಕಿನಲ್ಲಿ ಸಾಲ ಪಡೆದಿದ್ದೆ. ನಾನು ಎರಡು ಚೆಕ್ಕಿನ ಪ್ರಕರಣಗಳನ್ನು ದಾಖಲಿಸಿರುತ್ತೇನೆ. ಈ ಪ್ರಕರಣದ ಚೆಕ್ಕು ಹಣ 3,25,000/- ಮತ್ತು ಇನ್ನೊಂದು ಚೆಕ್ಕಿನ ಹಣ 2,50,000/- ಇರುತ್ತದೆ.

4) ನಾನು ಆರೋಪಿತನಿಗೆ ಮನೆ ಕಟ್ಟಲು ಕೂಡಿಟ್ಟ ಹಣ ನೀಡಿರುತ್ತೇನೆ. ಈ ಬಗ್ಗೆ ನನ್ನ ದೂರಿನಲ್ಲಿ ಬರೆದಿರುವುದಿಲ್ಲ. ಇನ್ನೊಂದು ಚೆಕ್ಕಿನ ಹಣ ಸ್ವಲ್ಪ ಸ್ವಲ್ಪ ಹಣ ಕೊಟ್ಟಿರುತ್ತೇನೆ. ತಿಂಗಳಿಗೆ ರೂಪಾಯಿ 20,000/- ರಿಂದ 25,000/-ಆದಾಯ ನಮ್ಮ ಮನೆತನಕ್ಕೆ ಇದೆ. ನಮ್ಮ ಮನೆಯಲ್ಲಿ ಮೂರು ಜನ ಇರುತ್ತೇವೆ. ನಮ್ಮ ಮನೆತನದ ಖರ್ಚಿಗೆ ತಿಂಗಳಿಗೆ 10,000/- ರೂಪಾಯಿಗಳು ಸಾಕಾಗುತ್ತದೆ. ನಾನು ಅಂಗಡಿ ಮತ್ತು ವ್ಯಾಪಾರದಿಂದ ಆದಾಯ ಬರುತ್ತದೆ ಅಂತಾ ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ನಾನು ಮಹಿಳೆಯರ ಪರವಾಗಿ ತಹಶೀಲ್ದಾರ ಕಚೇರಿಯಲ್ಲಿ ಮತ್ತು ಪೋಲೀಸ ಠಾಣೆಯಲ್ಲಿ ಸುಳ್ಳು ದೂರನ್ನು ಸಲ್ಲಿಸುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

5) ನಾನು ಬೆಂಗಳೂರಿನ ಒಬ್ಬ ಶೇಟು ಅಂಗಡಿಯಲ್ಲಿ ಬಟ್ಟೆ ತರುತ್ತೇನೆ. ಸದರಿ ಬಟ್ಟೆ ರಶೀದಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಸೀರೆ ವ್ಯಾಪಾರ ಮಾಡುತ್ತೇನೆ. ನಾನು ಯಾವುದೇ ಬಟ್ಟೆ ತರದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 23.10.2020 ರಂದು ನಾನು ಆರೋಪಿತನಿಗೆ ಹಣ ನೀಡಿರುತ್ತೇನೆ ನಂತರ 28.10.2020 ರಂದು ಆರೋಪಿತನು ಚೆಕ್ಕನ್ನು ನೀಡಿರಬಹುದು.

4) ನಾನು ಹಣ ಕೊಡುವಾಗ ಆರೋಪಿತನು ಮಾತ್ರ ಬಂದಿರುತ್ತಾನೆ. ಆಗ ಮಧ್ಯಾಹ್ನ ಆಗಿತ್ತು. ಹಣ ಒಂದು ತಿಂಗಳ ನಂತರ ವಾಪಾಸ್ಸು ಮಾಡುತ್ತೇನೆ ಅಂತಾ ಹೇಳಿರುತ್ತಾನೆ. ಈ ಬಗ್ಗೆ ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ನಾನು ಬ್ಯಾಂಕುಗಳಲ್ಲಿ ಸ್ವಂಧಾನ ಗ್ರಾಮೀಣ ಕೂಟ ಮತ್ತು ಗ್ರಾಮಶಕ್ತಿ ಸಾಲ ಪಡೆದು ತುಂಬುತ್ತಾ ಬಂದಿರುತ್ತೇನೆ. ನಾನು ಬ್ಯಾಂಕುಗಳಲ್ಲಿ ಸ್ವಂಧಾನ ಗ್ರಾಮೀಣ ಕೂಟ ಮತ್ತು ಗ್ರಾಮಶಕ್ತಿ ಸಾಲ ಪಡೆದು ಹಣ ತುಂಬುದೇ ಮೋಸ ಮಾಡುವ ಹಲವಾರು ಪ್ರಕರಣಗಳು ಇವೆ ಎಂದರೆ ಸರಿಯಲ್ಲ. ಆರೋಪಿತನು ಹೆಚ್. ಡಿ. ಎಫ್. ಸಿ ಬ್ಯಾಂಕಿನ ಚೆಕ್ಕು ನೀಡಿರುತ್ತಾನೆ. ಆದರೆ ಯಾವ ಬ್ರ್ಯಾಂಚ್ ಎಂದು ನನಗೆ ಗೊತ್ತಿಲ್ಲ.

5) ನಿಪಿ-1 ನ್ನು ಆರೋಪಿತನು ಬರೆದಿರುತ್ತಾನೆ. ನಿಪಿ-1 ರ ಮೇಲೆ ಆರೋಪಿತನು ಬರೆದಿರುತ್ತಾನೆ. ನಿಪಿ-1 ರ ಮೇಲೆ ಹಣ ಮತ್ತು ಹೆಸರು ಮತ್ತು ಸಹಿ ಮಾಡಿರುವ ಅಕ್ಷರಗಳು ಆರೋಪಿತನದು ಅಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಮೇಲೆ ಬೇರೆ ಬೇರೆ ಮಸಿಯಿಂದ

ತುಂಬಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆದರೆ ಆರೋಪಿತನು ಬರೆದುಕೊಟ್ಟಿರುತ್ತಾನೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.